# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

# Spl.C.463/2022

ಚಾಸಾಃ 4 ಪ್ರಾಸಾಃ 4

**ದಿನಾಂಕ.15.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ಶ್ರೀನಿವಾಸ್ ಹೆಚ್ ಆರ್ |
| ಗಂಡ/ ತಂದೆಯ ಹೆಸರು | ರಾಮಣ್ಣ |
| ವಯಸ್ಸು | 41 ವರ್ಷ |
| ಕೆಲಸ | ಸಹಾಯಕ ಕಾರ್ಯ ನಿರ್ವಹಕ ಇಂಜಿನಿಯರ್ , ಬೆಸ್ಕಾಂ |
| ವಾಸಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಪ್ರಸ್ತುತ ದಾಬಸ್ ಪೇಟೆಯ ಬೆಸ್ಕಾಂನಲ್ಲಿ ಎ ಇ ಇ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) ನಾನು 2016 ರಿಂದ 2021 ರವರಿಗೆ ತುಮಕೂರು ಬೆಸ್ಕಾಂ ಇಲಾಖೆಯಲ್ಲಿ ಸಹಾಯಕ ಕಾರ್ಯ ನಿರ್ವಹಕ ಇಂಜಿನಿಯರ್, ತುಮಕೂರು ಟೌನ್ ಉಪವಿಭಾಗ -2 ದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

3) ದಿ 24-01-2020 ರಂದು ಬೆಸ್ಕಾಂ ಜಾಗೃತ ದಳ ಪೊಲೀಸರು ಒಂದು ಆರ್ ಆರ್ ಸಂಖ್ಯೆ ಮಂಜೂರಾತಿ ಪಡೆದ ಬಗ್ಗೆ ದಾಖಲಾತಿ ನೀಡುವಂತೆ ಒಂದು ಪತ್ರ ಬಂದಿತ್ತು. ದಿ 24-01-2020 ರಂದು ಪೊಲೀಸರ ಮನವಿ ಪತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು. ಸದರಿ ಕೋರಿಕೆಯ

ಆಧಾರದ ಮೇರೆಗೆ ದಿ 24-02-2020 ರಂದು ಆರ್ ಆರ್ ನಂ.ಎ 18943 ಸಂಬಂದಿಸಿದ ದೃಡೀಕೃತ ದಾಖಲೆಗಳನ್ನು ಕೋರಿರುತ್ತಾರೆ. ಅದರಂತೆ ನಮ್ಮ ಶಾಖೆಯಿಂದ ಸಹಾಯಕ ಕಾರ್ಯ ನಿರ್ವಹಕ ಇಂಜಿನಿಯರ್ ವಿಭಾಗ , ನಗರ ಉಪವಿಭಾಗ-1 ಇವರಿಗೆ ಪತ್ರ ವ್ಯವಹಾರ ಮಾಡಿ ಸದರಿ ಆರ್ ಆರ್ ಸಂಖ್ಯೆ ಯ ದಾಖಲೆಗಳನ್ನು ನೀಡುವಂತೆ ಪತ್ರ ವ್ಯವಹಾರ ಮಾಡಿದ್ದು, ಸದರಿ ಶಾಖೆಯವರು ದಿ 29-01-2020 ರಂದು ಕಚೇರಿಯಲ್ಲಿ ಯಾವುದೇ ಕಡತಗಳು ಲಭ್ಯವಿರುವುದಿಲ್ಲವೆಂದು ಮತ್ತು ರಿಜಿಸ್ಟರ್ ನಲ್ಲಿ ಆರ್ ಆರ್ ನಂ. ಎ 18943 ದಿ 25-09-2000 ಎಲ್ ಟಿ -2 ಜಕಾಯತಿಯಲ್ಲಿ 5 ಕಿಲೋ ವ್ಯಾ ಟ್ ಮಂಜೂರಾತಿಯಾಗಿದೆಯೆಂದುಪತ್ರ ನೀಡಿದ್ದು , ಸದರಿ ಪತ್ರದೊಂದಿಗೆ ದಿ 24-02-2020 ರಂದು ಪತ್ರದ ಮೂಲಕ ದಾಖಲೆಯನ್ನು ಜಾಗೃತ ಧಳ ಪೊಲೀಸರಿಗೆ ಹಾಜರುಪಡಿಸಿರುತ್ತೇನೆ. ದಿ 24-02-2020 ರ ಪತ್ರವನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-9 (ಎ) ಎಂದು ಗುರುತಿಸಲಾಯಿತು. ಉಪವಿಭಾಗ-1 ರವರು ನೀಡಿರುವ ಪತ್ರವನ್ನು ನಿಪಿ-10 ಎಂದು ಗುರುತಿಸಲಾಯಿತು. ಮೇಲೆ ನಮೂದಿಸಿರುವ ಆರ್ ಅರ್ ಸಂಖ್ಯೆಯು ನಮ್ಮ ದಾಖಲೆಗಳ ಪ್ರಕಾರ ಜಗದೀಶ್ ಪುನೀತ್ ರವರ (2 ನೇ ಆರೋಪಿ) ರವರ ಹೆಸರಿಗೆ ಮಂಜೂರಾತಿಯಾಗಿರುತ್ತದೆ. ಎಲ್ ಟಿ -2 ಅಂದರೆ ಗೃಹಬಳಕೆ ಜಕಾಯತಿ ಎಂದು ಕರೆಯುತ್ತಾರೆ. ನಾನು ಜಾಗೃತ ದಳ ಪೊಲೀಸರಿಗೆ ವಿವರ ಕೊಡುವ ಸಮಯದಲ್ಲಿ ಎಲ್ ಟಿ -2 ಯಾವುದೇ ಬದಲಾವಣೆ ಆಗಿರಲಿಲ್ಲ.

**<u>ಪಾಟೀ ಸವಾಲು 2 ನೇ ಆರೋಪಿಯ ಪರ ಶ್ರೀ ಹೆಚ್ ವಿ ಆರ್ ವಕೀಲರಿಂದಃ</u>**

4) ಯಾವುದೇ ಒಬ್ಬ ವ್ಯಕ್ತಿ ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾದರೆ ಅರ್ಜಿಯ ಜೊತೆಗೆ ನಿರ್ದಿಷ್ಟವಾದ ಕೆಲವು ದಾಖಲಾತಿಗಳನ್ನು ಒದಗಿಸಬೇಕು ಅಂದರೆ ಸರಿ . ನಗರ ಪ್ರದೇಶ ಆಗಲಿ ಅಥವಾ ಗ್ರಾಮೀಣವಾಗಲಿ ಗ್ರಾಹಕರಿಗೆ ಯಾವ ರೀತಿಯ ಸಂರ್ಪಕ ಬೇಕು ಅದಕ್ಕೆ ಸಂಬಂದಪಟ್ಟ ದಾಖಲಾತಿಗಳನ್ನು ಸಂಗ್ರಹಿಸುತ್ತೇವೆ. ನಮ್ಮ ಕಚೇರಿಯಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ 2 ನೇಆರೋಪಿಯು ದಿ25-09-2000 ದಂದು ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾನೆ.

5) 2000 ದಲ್ಲಿ ತುಮಕೂರು ನಗರವು ನಗರಸಭೆಗೆ ಸೇರಿತ್ತು ಅಂದರೆ ಸರಿ. 2000 ನೇ ಸಾಲಿನಲ್ಲಿ ನಮೂನೆ-3 ನ್ನು ಮತ್ತು ಕಟ್ಟಡ ಪ್ರಾರಂಭ ಪ್ರಮಾಣ ಪತ್ರವನ್ನು ಟೂಡಾರವರೇ ನೀಡಿರುತ್ತಾರೆ ಅಂದರೆ ಸರಿ. ಅರ್ಜಿದಾರರು ಅರ್ಜಿಯ ಜೊತೆಯಲ್ಲಿ ಸಲ್ಲಿಸಿರುವ ನಮೂನೆ -3 ಮತ್ತು ಪ್ರಾರಂಭಿಕ ಪತ್ರದ ಕಟ್ಟಡದ ಪರವಾನಿಗೆಯ ಪ್ರಕಾರ , ಬಿಲ್ಡಿಂಗ್ ನಕ್ಷೆಯ ಪ್ರಕಾರ ನಾವು ವಿದ್ಯುತ್ ಸಂರ್ಪಕವನ್ನು ಜಕಾಯತಿ-2 ಅಥವಾ 3 ಕೊಡಬೇಕಾ ಎಂದು ನಿರ್ಧಾರ ಮಾಡುತ್ತೇವೆ ಅಂದರೆ ಸರಿಯಲ್ಲ. ಗ್ರಾಹಕರ ಕೋರಿಕೆಯ ಮೇರೆಗೆ ಕೊಡುತ್ತೇವೆ. ಸಾಕ್ಷಿಯು ಮುಂದುವರೆದು ಯಾವ ಸಂಸ್ಥೆಯು

ನಿರ್ವಹಿಸುತ್ತದೆಯೋ ಅದರ ಆಧಾರದ ಮೇರೆಗೆ ಯಾವುದು ನೀಡಬೇಕೆಂದು ತೀರ್ಮಾನ ಮಾಡುತ್ತೇವೆ. 2 ನೇ ಆರೋಪಿಯು 2000 ನೇ ಇಸವಿಯಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಲು ತಮ್ಮ ಅರ್ಜಿಯ ಜೊತೆಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿದ್ದನು ಎಂದು ಈಗ ನನ್ನ ಬಳಿ ಇರುವುದಿಲ್ಲ, ಕಚೇರಿಯಲ್ಲಿ ಇದ್ದು ಪರಿಶೀಲನೆ ಮಾಡಿ ಹೇಳಬೇಕಾಗುತ್ತದೆ. ನಮ್ಮ ಇಲಾಖೆಯ ಮೀಟರ್ ರೀಡರ್ ಗೆ ಪರಿಶೀಲನೆ ಗಾಗಿ ಹೋದಾಗ ಯಾವ ಜಕಾಯತಿ ಎಂದು ಗೊತ್ತಾಗುತ್ತದೆ ಅಂದರೆ ಸರಿ. 2 ನೇ ಆರೋಪಿತನು ನಮ್ಮ ಸಂಸ್ಥೆಗೆ ಯಾವುದೇ ಬಾಕಿ ಉಳಿಸಿಕೊಂಡಿರುವುದಿಲ್ಲ. ಯಾವುದೇ ವ್ಯಕ್ತಿಯು ಅರ್ಜಿ ಮತ್ತು ದಾಖಲಾತಿ ಸಲ್ಲಿಸಿದಾಗ ನಾವು ಸ್ಥಳಕ್ಕೆ ಭೇಟಿ ನೀಡಿ ಎಲ್ಲವೂ ಸರಿಯಾಗಿದೆಯೆಂದು ಪರಿಶೀಲಿಸಿಸುತ್ತೇವೆ ಅಂದರೆ ಸರಿ. ಸದರಿ ವರದಿಯನ್ನು ಪರಿಶೀಲಿಸಿ ನಾವು ಆರ್ ಆರ್ ನಂಬರ್ ನ್ನು ನೀಡುತ್ತೇವೆ ಅಂದರೆ ಸರಿ. ತನಿಖಾಧಿಕಾರಿಗಳಿಗೆ ಅವರು ಕೇಳಿದ ದಾಖಲಾತಿಗಳನ್ನು ಅಂತಿಮ ವರದಿ ಸಲ್ಲಿಸುವವರಿಗೆ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದ ತನಿಖಾಧಿಕಾರಿಗಳು 2 ನೇ ಆರೋಪಿಯು ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳುವ ಸಮಯದಲ್ಲಿ ತಮ್ಮ ಅರ್ಜಿಯ ಜೊತೆಗೆ ಯಾವ ಯಾವ ದಾಖಲೆಗಳನ್ನು ಸಲ್ಲಿಸಿದ್ದರು ಎಂದು ಕೇಳಿದ್ದರು ಎನ್ನುವ ಪ್ರಶ್ನೇಗೆ ಸಾಕ್ಷಿಯು ದಾಖಲೆಗಳನ್ನು ಪರಿಶೀಲಿಸಬೇಕೆಂದು ನುಡಿಯುತ್ತಾರೆ. ನಿಪಿ-8 ರಲ್ಲಿ ಈ ಪ್ರಕರಣದ

ತನಿಖಾಧಿಕಾರಿಗಳು ಕೇಳಿದ ಮಾಹಿತಿಯನ್ನು ಕಚೇರಿಯಲ್ಲಿ ಪರಿಶೀಲಿಸಬೇಕೆಂದು ನುಡಿಯುತ್ತಾರೆ. 2 ನೇ ಆರೋಪಿತನು ಇವತ್ತಿನವರಿಗೂ ಸಹ ತನ್ನ ಅರ್ಜಿಯಲ್ಲಿ ಕೇಳಿರುವ ಮಾಹಿತಿಯಂತೆ ವಿದ್ಯುತ್ ಸಂಪರ್ಕವನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆ, ಆದರೆ ತನಿಖಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 2 ನೇ ಆರೋಪಿತನು ತಮ್ಮ ಅರ್ಜಿಯ ಜೊತೆಗೆ ಸಲ್ಲಿಸಿರುವ ದಾಖಲಾತಿಗಳು ಲಭ್ಯವಿಲ್ಲದ ಕಾರಣ ಜಕಾಯತಿ-2 ಅಥವಾ ಜಕಾಯತಿ-3 ಕೊಡಬೇಕ ಎಂದು ನನಗೆ ಹೇಳಲು ಬರುವುದಿಲ್ಲ ಎಂಬ ಪ್ರಶ್ನೇಗೆ 2 ನೇ ಆರೋಪಿತನು ಬಳಕೆ ಮಾಡುವ ರೀತಿಯಲ್ಲಿ ನಿರ್ಧಾರವಾಗುತ್ತದೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಯು ಕೋರಿರುವ ದಾಖಲೆಗಳನ್ನು ನೀಡಿರುತ್ತೇನೆ. ನಾನು ಊಹೆಯ ಮೇರೆಗೆ ಎಲ್ ಟಿ -3 ಗೆ ಬೇಕಾಗುತ್ತದೆ ಎಂದು ನುಡಿದಿರುತ್ತೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲು 1 ನೇ ಆರೋಪಿಯ ಪರ ಶ್ರೀ ಎನ್ ಸಿ ಜಿ ವಕೀಲರಿಂದಃ</u>**

6) ಈ ಪ್ರಕರಣದ ತನಿಖಾಧಿಕಾರಿಗಳಿಗೆ ಮೇಲೆ ತಿಳಿಸಿದ ಆರ್ ಆರ್ ನಂಬರ್ ನ ಯಾವುದೇ ದಾಖಲಾತಿಗಳು ನೀಡಿಲ್ಲ ಅಂದರೆ ಸರಿಯಲ್ಲ. ನಮ್ಮಲ್ಲಿ ಲಭ್ಯವಿರುವ ರಿಜಿಸ್ಟರ್ ಮತ್ತು ಕಂಪ್ಯೂಟರ್ ನಲ್ಲಿ ಲಭ್ಯವಿರುವ ಇತರೆ ವಿವರಗಳನ್ನು ನೀಡಿರುತ್ತೇವೆ.

(ಉಳಿಕೆ ಪಾಟೀ ಸವಾಲನ್ನು 2 ನೇಆರೋಪಿಪರ ವಕೀಲರು ಮಾಡಿರುವುದನ್ನೇ ಆಳವಡಿಸಿಕೊಳ್ಳಲು ಕೋರಿರುತ್ತಾರೆ.)

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.